**ದಿನಾಂಕ: 14-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು:-ವಾದಿಯ** ಪರ **ಶ್ರೀ.ಎನ್.ಕೆ** ವಕೀಲರಿಂದ:-

ವಾದಿಗಳು ಏನ ದಾವೆ ಹೂಡಿದ್ದಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ವಾದಿಗಳು ಏನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆಂದು ಗೊತ್ತಿದಿಯಾ ಎಂದರೆ ಸಾಕ್ಷಿಯು ಗೊತ್ತು, ಅದನ್ನು ನಾನೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-1, 2 ಮತ್ತು 6 ಪೋಟೋದಲ್ಲಿರುವ ವ್ಯಕ್ತಿ ನೀವೇ ಎಂದರೆ ಸಾಕ್ಷಿಯು ಅದು ನಾನು ಅಲ್ಲ ಎಂದು ನುಡಿಯುತ್ತಾರೆ. ಸದರಿ ಪೋಟೋಗಳಲ್ಲಿರುವ ವ್ಯಕ್ತಿ ನೀವಾದರೂ ಸಹ ನೀವಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ತಕರಾರು ಅರ್ಜಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣಕ್ಕೂ ಒಂದಕ್ಕೊಂದು ತಾಳೆ ಆಗುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ನಮ್ಮ ವಕೀಲರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಕರಾರು ಅರ್ಜಿಯಲ್ಲಿ ಗಂಗಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಯಾವ ಆದಾರದ ಮೇಲೆ ಹೇಳಿರುತ್ತೀರಿ ಎಂದರೆ ಸಾಕ್ಷಿಯು ಅವರು ನನ್ನ ಹೆಂಡತಿಯಾಗಿದ್ದರೆ ಅವರೇ ದಾವೆ ಹೂಡ ಬೇಕಾಗಿತ್ತು, ಆದರೆ ಮಕ್ಕಳು ಎಂದು ಕೊಂಡು ಬಂದು ವಾದಿಗಳು ದಾವೆಯನ್ನು ಹೂಡಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಪ್ರಮಾಣ ಪತ್ರದಲ್ಲಿ ಗಂಗಮ್ಮನವರು ಪಂಚಾಯಿತಿಯಿಂದ ನಿಮ್ಮ ಬಳಿ ಭಾಗವನ್ನು ಬೇಡವೆಂದು ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ-6ರಲ್ಲಿರವ ವ್ಯಕ್ತಿ ಸಿದ್ದಗಂಗಮ್ಮ @ ಗಂಗಮ್ಮ ಎಂದರೆ ಸರಿ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಯನ್ನು ಬಿಟ್ಟು ಬೇರೆ ದಾಖಲಾತಿಗಳನ್ನು

ಹಾಜರುಪಡಿಸುವ ಅವಶ್ಯಕತೆ ಇದೆಯಾ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ.

2. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಪರವಾಗಿ ನೀವು ಸಾಕ್ಷಿ ನುಡಿಯುತ್ತಿದ್ದೀರಾ ಅಥವಾ ಇತರೆ ಪ್ರತಿವಾದಿಗಳ ಪರವಾಗಿಯೂ ಸಹ ನೀವು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿಯು ಬೇಕಾದರೆ ಅವರನ್ನು ಕರೆಸುತ್ತೇನೆಂದು ನುಡಿಯುತ್ತಾರೆ. ಸಿದ್ದಗಂಗಮ್ಮನವರು ಬಾಗ ಬೇಡ ಎಂದು ಹಣ ಪಡೆದುಕೊಂಡು ಹೋದ ಬಗ್ಗೆ ಯಾವುದಾದರೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಪಂಚಾಯಿತಿಯಲ್ಲಿ ಹಣವನ್ನು ವಾದಿಯವರ ತಾಯಿಗೆ ನೀಡಿದಾಗ ಎಷ್ಟು ಹಣವನ್ನು ನೀಡಿರುತ್ತೀರಿ ಎಂದು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ಹಣವನ್ನು ವಾದಿ ಮತ್ತು ಅವರ ತಾಯಿಯವರಿಗೆ ಸೇರಿಸಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ಇಬ್ಬರಿಗೂ ಸೇರಿಸಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಸಿದ್ದಗಂಗಮ್ಮನವರನ್ನು 1985ರಲ್ಲಿ ಮದುವೆ ಆಗಿರುತ್ತೀರಿ ಆಸಂಬಂಧ ನಿಪಿ-5 ಲಗ್ನ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ.ಎಷ್ಟು ಹಣವನ್ನು ನೀಡಿರುತ್ತೀರಿ ಎಂದು ಮುಂದಿನ ದಿನಾಂಕದಿಂದು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಡಿಸುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆಗ ನಿಮ್ಮ ಬಳಿ ಹಣ ಇತ್ತು ಎಂದು ತೋರಿಸಲು ದಾಖಲಾತಿಯನ್ನು ನೀಡುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

3. ನೀವು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣದ ಅಂಶಗಳು ಪ್ರತಿವಾದ ಪತ್ರದಲ್ಲಿ ಇಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.ಇಂದು ನ್ಯಾಯಾಲಯದ ಮುಂದೆ ಇರುವ 1ನೇ ವಾದಿ ನಾಗೇಶ್

ರವರು ಸಿದ್ದಗಂಗಮ್ಮನವರ ಮಗ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.ವಾದಿಗಳು ನಿಮ್ಮ ಮಕ್ಕಳು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ನಿಮ್ಮ ಡಿ.ಎನ್.ಎ ಪರೀಕ್ಷೆ ಮಾಡಲು ನಿಮ್ಮ ತಕರಾರು ಇಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**